ಬಂದು ನಿಖಾಲೆ ಮಾಡಂವುದಕ್ಕೆ ಅಧಿಕಾರಸ್ಥರು ಇಟ್ಟುಕೊಂಡಿದ್ದಾರೋ ಅಂತಹವುಗಳನ್ನು ಒಂದು ವಾರದೊಳಗೆ ನಿಖಾಲೆ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ನಮ್ಮ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಔದ್ಯೋಗಿಕ ನೀತಿಯ ಆಧಾರದ ಮೇಲೆ ನಾವು ೧೯೫೩ರಲ್ಲಿ ಇಂಡಸ್ಟ್ರಿಯಲ್ ಪಾಲಿಸಿ ಅನೌನ್ಸ್ ಮಾಡಿದೆವು. ಅದರ ಪ್ರಕಾರ ಇಂಟೆನ್ಸಿವ್ ಕೊಡುವಾಗ ೧೯೫೪-೫೫ರವರೆಗೆ ಎಷ್ಟು ಉದ್ಯಮಗಳಿವೆ, ಅವು ಯಾವರೀತಿ ಪ್ರೊಗ್ರೆಸ್ ಆಗಿವೆಯೋ ಅದರ ಮೇಲೆ ಕೊಟ್ಟು ಕೊಂಡು ಬಂದಿದ್ದೇವೆ. ೧೯೫೫-೫೬ ಮತ್ತು ಈ ವರ್ಷದ ಹಣಕಾಸಿನ ಕೊರತೆಯಿಂದಾಗಿ ಕೆಲವು ಉದ್ಯಮಗಳಿಗೆ ನಾವೇ ಕನ್‌ವಿನ್ಸ್ ಆಗಿದ್ದೇವೊ ಅವುಗಳಿಗೆ ಈಗ ಕೊಡುವ ಅವಶ್ಯಕತೆ ಇಲ್ಲ, ಇನ್ನು ಕೆಲವು ಉದ್ಯಮಗಳಿಗೆ ಅವಶ್ಯಕತೆ ಇದೆ, ತಕ್ಷಣ ಕೊಡುವುದಕ್ಕಾಗುವುದಿಲ್ಲ. ಆದರೆ ಯಾವುದಾದರೂ ಒಂದು ಉದ್ಯಮ ಡಿಸರ್ವಿಂಗ್ ಇದ್ದು ಕೊಡಬೇಕಾದ್ದು ಬದ್ಧವಾದಾಗ ಈ ವರ್ಷದ ಪಟ್ಟಿಯಲ್ಲಿ ಅದನ್ನು ಸೇರಿಸಿಕೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಬಹಳ ಸಂತೋಷ. ಆದರೆ ಇಂಟೆನ್ಸಿವ್ ಕೊಡುತ್ತೇವೆಂದು ವಚನ ಕೊಟ್ಟಮೇಲೆ ಅದಕ್ಕೆ ಬದ್ಧರಾಗಬೇಕಾಗುತ್ತದೆ. ತಮ್ಮಲ್ಲಿ ಹಣದ ಕೊರತೆ ಇದ್ದರೆ ದೀಪಕ್ ಕೇಬಲ್ಸ್‌ಗೆ ೩ ಕೋಟಿ ಕೊಟ್ಟು ಇತರೇ ಅನೇಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಹಣ ಇಲ್ಲ ಎಂದ ಹಾಗೆ ಆಗುತ್ತದೆ. ಆದುದರಿಂದ ಇನ್ನು ಮೇಲಾದರೂ ಯೋಗ್ಯವಾಗಿರತಕ್ಕದ್ದನ್ನು ಪುನರ್ವಿಮರ್ಶೆ ಮಾಡಿ ತೀವ್ರ ಹಣ ಸಿಗುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಅವರ ಸಲಹೆಯನ್ನು ಒಪ್ಪುತ್ತೇನೆ. ಆದರೆ ಲೋನ್ ಓನ್ಲಿ ಸೇಲ್ಸ್ ಟ್ಯಾಕ್ಸ್‌ಗೆ, ಎಲೆಕ್ಟ್ರಿಸಿಟಿ ಟ್ಯಾಕ್ಸ್‌ಗೆ ಎಕ್ಸಂಪ್ಷನ್ ಬೇರೆ. ಆದಂ ಲೋನ್ ಒಳಗೆ ಸೇರುವುದಿಲ್ಲ.

ರಿಯಾಯಿತಿ ಬೆಲೆಯ ಧೋತಿ ಮಂತ್ತು ಸೀರೆಗಳ ಯೋಜನೆ

೩. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ).—ಮಾನ್ಯ ಸಣ್ಣ ಪ್ರಮಾಣದ ರಾಜ್ಯ ಕೈಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

೮) ರಿಯಾಯಿತಿ ಬೆಲೆಯ ಧೋತಿ ಮತ್ತು ಸೀರೆ ಯೋಜನೆ ಎಷ್ಟು ತಾಲ್ಲೂಕುಗಳಲ್ಲಿ ಜಾರಿಗೆ ಬಂದಿದೆ ?

ಆ) ಯಾವ ಆಧಾರದ ಮೇಲೆ ಈ ತಾಲ್ಲೂಕುಗಳನ್ನು ಆರಿಸಲಾಗಿದೆ ?

೫) ಪ್ರತಿಯೊಂದು ತಾಲ್ಲೂಕುಗಳಲ್ಲಿ ಫಲಾನುಭವಿಗಳ ಸಂಖ್ಯೆ ಎಷ್ಟು ಮತ್ತು ಪ್ರತಿಯೊಂದು ತಾಲ್ಲೂಕುಗಳಲ್ಲಿ ಎಷ್ಟು ಧೋತಿ ಮತ್ತು ಸೀರೆಗಳನ್ನು ಹಂಚಲಾಗಿದೆ ?

ಈ) ಉಳಿದ ತಾಲ್ಲೂಕುಗಳಲ್ಲಿ ಯಾವಾಗ ಈ ಯೋಜನೆಯನ್ನು ಜಾರಿಗೆ ತರಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಕೈಗಾರಿಕಾ ರಾಜ್ಯ ಮಂತ್ರಿಗಳು).—

೮) ೯೫.

ಆ) ಈ ಮೇಲಿನ ತಾಲ್ಲೂಕುಗಳನ್ನು ಕನ್ನಡ ವರ್ಣಮಾಲೆಯ ಪ್ರಕಾರ ಆರಿಸಲಾಗಿದೆ.

೫) ವಿವರವಾದ ಪಟ್ಟಿಯನ್ನು ಲಗತ್ತಿಸಿದೆ.

ಈ) ಇನ್ನುಳಿದ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಮಾರ್ಚ್ ೧೯೫೬ ರಿಂದ ಜುಲೈ ೧೯೫೬ರ ರೊಳಗೆ ತರಲಾಗುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ರಿಯಾಯಿತಿ ಬೆಲೆಯಲ್ಲಿ ಧೋತಿ ಮತ್ತು ಸೀರೆ ಯೋಜನೆಯನ್ನು ಈಗ ೯೫ ತಾಲ್ಲೂಕುಗಳಲ್ಲಿ ಜಾರಿಗೆ ತಂದಿದ್ದೇವೆ ಎಂದು ಹೇಳಿದ್ದಾರೆ. ಆದರೆ ಒಂದು ತಾಲ್ಲೂಕನ್ನು ನೀವು ಆಯ್ಕೆ ಮಾಡಿದಮೇಲೆ ಆ ತಾಲ್ಲೂಕಿನ ಒಳಗೆ ಇರತಕ್ಕ ಹಳ್ಳಿಗಳನ್ನು ಆಯ್ಕೆ ಮಾಡಿದ್ದೀರಾ, ಏಕೆಂದರೆ ಎಲ್ಲಾ ಹಳ್ಳಿಗಳಲ್ಲೂ ಇದನ್ನು ಜಾರಿಗೆ ಕೊಟ್ಟಿಲ್ಲ. ಆದ್ದರಿಂದ ಇದನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡಿದಿರಿ ಎನ್ನುವುದು ಪ್ರಶ್ನೆ. ಎರಡನೆಯದು, ವಿವರವಾದ ಪಟ್ಟಿಯನ್ನು

ಕೊಡಲು ಕೆಲವು ಭಾಗದಿಂದ ಮಾತ್ರ ವಿವರಗಳು ಬಂದಿಲ್ಲ ಎಂದು ಹೇಳಿದ್ದೀರಿ. ಫಲಾನುಭವಿಗಳ ಸಂಖ್ಯೆ ಕೊಟ್ಟಿದ್ದೀರಿ. ಆದರೆ ಎಷ್ಟು ಸೀರೆಗಳನ್ನು ಹಂಚಿದ್ದೀರಿ ಎಂದು ಕೇಳಿದಾಗ ಆ ವಿವರಗಳನ್ನು ತಾವು ಇದರಲ್ಲಿ ಒದಗಿಸಿಲ್ಲ. ಈಗ ಗುರುತಿಸಲ್ಪಟ್ಟ ಫಲಾನುಭವಿಗಳ ಬಗ್ಗೆ ಗಂಡಸರು ೧೬ ಸಾವಿರ ಹೆಂಗಸರು ೧೬ ಸಾವಿರ ಎಂದು ಹೇಳಿದ್ದೀರಿ. ಆದರೆ ಕೊಟ್ಟಿರುವುದು ಕೇವಲ ೪ ಸಾವಿರ, ೪ ಸಾವಿರ ಮಾತ್ರ. ಕೆಲವು ಹಳ್ಳಿಗಳಲ್ಲಿ ಇಂತಹವರು ಶೇಕಡಾ ೯೦ ಭಾಗ ಇದ್ದರೂ ಸಹ ಕೇವಲ ಗುರುತಿಸಿದವರಿಗೆ ಮಾತ್ರ ಕೊಟ್ಟಿದ್ದೀರಿ. ಇನ್ನು ಕೆಲವು ತಾಲ್ಲೂಕುಗಳಲ್ಲಿ ಕೆಲವು ಭಾಗದ ಜನರಿಗೆ ಕೊಟ್ಟಿಲ್ಲ. ಈರೀತಿ ವೈಪರೀತ್ಯಗಳು ತುಂಬ ಇವೆ. ನೀವು ಕೊಟ್ಟಿರುವ ಸಂಖ್ಯೆಯಲ್ಲಿ, ಗುರುತಿಸಲ್ಪಟ್ಟಿರತಕ್ಕ ಪ್ರತಿಯೊಬ್ಬ ವ್ಯಕ್ತಿಗೆ ವರ್ಷಕ್ಕೆ ಒಂದು ಸಾರಿ ಗಂಡಸಾದರೆ ೨ ಧೋತಿ, ಬಟ್ಟೆ, ಹೆಂಗಸಾದರೆ ೨ ಸೀರೆ ಕುಪ್ಪಸದ ಬಟ್ಟೆ ಕೊಡಂವುದು.

ಸೀರೆ ಮತ್ತು ಧೋತಿ ಯೋಜನೆಯಲ್ಲಿ ಫಲಾನುಭವಿಗಳ ಮತ್ತು ಲಾಭ ಪಡೆದವರ ತಾಲ್ಲೂಕುವಾರು ಪಟ್ಟಿ.—ಅಕ್ಟೋಬರ್ ೮೫.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ		ಲಾಭ ಪಡೆದವರು	
		ಗಂಡಸರು	ಹೆಂಗಸರು	ಗಂಡಸರು	ಹೆಂಗಸರು
೧	೨	೩	೪	೫	೬
೧	ಕಡೂರು	೨೬,೭೩೭	೦.೨೪,೮೨೭	೦,೨೩,೨೬೧	೦.೨೧,೧೧೮
೨	ಕಾಲ್‌ಘಟ್‌ಗಿ	೧೬,೮೬೩	೦,೧೬ ೪೬೩	೦,೧೧,೪೫೧	೦,೧೪,೦೮೬
೩	ಅಫ್‌ಜಲ್‌ಪುರ	೧೩,೮೨೩	೦,೧೩,೭೬೩	೦,೧೧,೨೫೨	೦,೧೧,೬೧೮
೪	ಆಥಣಿ	೩೨,೭೩೨	೦,೩೨ ೬೪೮	೨,೨೭,೭೬೯	೦,೨೬,೯೨೦
೫	ಕೊರಟಗೆರೆ	೧೮,೨೬೪	೧,೧೬,೯೮೩	೦.೦೮,೪೦೦	೦,೦೯,೧೦೦
೬	ಚಿನ್ನಗಿರಿ	೨೧,೫೯೮	೦,೨೦,೮೧೧	೦.೧೫,೦೩೦ ೦,೦೩,೩೪೫	೦,೦೭,೨೫೫ ೦,೦೩,೯೧೧
೭	ಕೋಲಾರ	೨೪,೮೧೩	೦,೨೪,೮೧೩	೦,೧೮,೦೫೯	೦,೨೨,೧೩೫
೮	ಕೊಪ್ಪಾಲ್	೨೪,೧೨೫	೦,೨೧,೭೪೬	೦.೧೭,೧೪೬	೦,೧೫,೪೪೮
೯	ಶಿರದ್	೧೬,೨೦೯	೦,೧೫,೯೬೧	೦.೧೪,೧೬೫	೦,೧೩,೭೧೪
೧೦	ಅರಕಲಗೂಡು	೧೪,೫೦೨	೦,೧೪,೦೬೩	೦,೦೯,೨೧೪	೦,೦೮,೭೭೯
೧೧	ಅಂಕೋಲ	೦೮,೨೩೭	೦,೦೮,೪೩೪	೦,೦೭.೦೪೫	೦.೦೬,೧೬೧
೧೨	ಕೆ. ಆರ್. ಪೇಟೆ	೨೦,೬೩೪	೦,೨೧,೬೯೬	೦.೧೫,೮೮೩	೦,೧೭,೬೭೨
೧೩	ಇಂಡಿ	೧೮,೯೫೯	೦,೧೭,೯೫೪	೦,೧೬,೫೭೨	೦,೧೫,೫೬೭
೧೪	ಆನೇಕಲ್	೨೩,೯೨೦	೦,೨೨,೦೮೦	೦.೧೪,೪೦೪	೦,೧೩,೮೩೧
೧೫	ಕೂಡ್ಲಿಗಿ	೧೫,೫೦೨	೦,೧೬,೫೧೧	೦,೧೯,೮೨೫	೦,೧೧,೨೦೫
೧೬	ಉಡುಪಿ	೧೪,೩೧೭	೦,೨೦,೯೮೩	೦,೦೭,೭೦೮	೦,೧೪,೨೯೮
೧೭	ಚಳ್ಳಕೆರೆ	೨೧,೧೧೮	೦,೧೯,೩೫೪	೦,೧೨,೮೨೬	೦,೦೦,೭೧೮
೧೮	ಕೊಪ್ಪೇಗಾಲ	೨೯,೭೧೮	೦,೨೬,೧೭೪	೦,೧೯,೮೬೬	೦,೧೯,೯೩೭
೧೯	ಮಡಿಕೇರಿ	೧೯.೩೮೦	೦,೧೯,೧೮೧	೦.೦೫,೮೦೦	೦.೦೫,೮೮೦
	ಒಟ್ಟು	೩,೭೧,೯೫೧	೩,೬೪,೪೪೫	೨,೫೯,೯೧೬	೨,೬೮,೨೭೩

ಸೀರೆ ಮತ್ತು ಧೋತಿ ಯೋಜನೆಯಲ್ಲಿ ಫಲಾನುಭವಿಗಳ ಮತ್ತು ಲಾಭ ಪಡೆದವರ ತಾಲ್ಲೂಕುವಾರು ಪಟ್ಟಿ.—ನವೆಂಬರ್ ೧೯೮೫

ಸಂಖ್ಯೆ	ತಾಲ್ಲೂಕುವಾರು ಹೆಸರು	ಫಲಾನುಭವಿಗಳ ಸಂಖ್ಯೆ		ಲಾಭ ಪಡೆದವರು	
		ಗಂಡಸರು	ಹೆಂಗಸರು	ಗಂಡಸರು	ಹೆಂಗಸರು
೧	೨	೩	೪	೫	೬
೧	ಜಮಖಂಡಿ	೦,೧೫,೬೬೫	೦,೧೫,೧೧೨	೦,೧೨,೧೮೭	೦,೧೧,೭೮೯
೨	ಅಲಂಡ್	೦,೨೫,೭೨೭	೦,೨೮,೮೯೦	೦,೧೧,೬೦೦	೦,೧೩,೦೦೦
೩	ಕುಷ್ಟಗಿ	೦,೧೬,೧೭೯	೦,೧೬,೪೪೮	೦,೦೪,೫೩೩	೦೪,೩೨೩
೪	ಬಳ್ಳಾರಿ	೦,೧೮,೩೮೭	೦,೧೮,೭೬೧	೦,೧೨,೬೩೧	೦,೧೨,೭೮೨
೫	ಬಸವ ಕಲ್ಯಾಣ	೦,೧೫,೩೪೦	೦,೧೪,೧೯೯	೦,೮೫,೪೫೨	೦,೦೫,೩೯೭
೬	ಕೆ. ಆರ್. ನಗರ	೦,೧೮,೮೮೨	೦,೧೮,೮೮೬	೦,೧೪,೯೯೦	೨,೦೪,೮೪೪
೭	ಆರಸೀಕೆರೆ	೦,೨೫,೭೦೬	೦,೨೪,೯೨೨	೦,೦೯,೬೭೩	೦,೦೯,೫೧೬
೮	ವೀರರಾಜಪೇಟೆ	೦,೧೮,೩೮೭	೦,೧೭,೦೪೯	೦,೦೭,೭೯೦	೦,೦೬,೭೯೦
೯	ನಾಗಮಂಗಲ	೦,೨೩,೯೧೫	೦,೨೪,೦೩೨	೦,೦೬.೮೭೦	೦,೦೬.೮೭೦
೧೦	ಕಂಬಿಗಲ್	೦,೩೩,೫೬೦	೦,೩೨,೦೭೬	೦,೦೬,೫೮೩ ೦,೦೫ ೦೮೦	೦,೦೫,೮೬೫ ೦,೦೪,೭೦೦
೧೧	ಕನಕಪುರ	೦ ೨೭,೬೧೧	೦,೩೫,೨೬೭	೦,೧೨,೩೦೦	೦,೧೧,೨೦೦
೧೨	ಗಂಡಿಬಂಡೆ	೦,೦೬,೭೯೨	೦,೦೬,೫೬೭	೦,೦೨,೬೭೪	೦,೦೨.೪೭೨
೧೩	ಕಾರವಾರ	೦,೧೦,೩೪೦	೦,೧೧,೩೯೩	೦ ೦೭,೭೩೬	೦,೦೯.೨೯೧
೧೪	ತೀರ್ಥಹಳ್ಳಿ	೦,೧೨,೦೪೩	೦,೧೧ ೩೨೬	೦,೦೫,೪೦೦	೦,೦೫,೧೦೦
೧೫	ಚಿತ್ರದುರ್ಗ	೦,೧೮,೩೮೭	೨,೧೭,೮೧೬	೦,೧೨,೮೧೧	೦,೧೩,೨೨೯
೧೬	ಕೊಪ್ಪ	೦,೧೨,೬೯೧	೦,೧೧,೩೬೪	೧,೦೮,೭೩೦	೦,೦೯,೯೯೧
೧೭	ಕಾರ್ಕಳ	೦,೦೭,೩೯೪	೦,೧೦,೦೬೯	೦,೦೬,೭೪೬	೦,೦೯.೦೬೯
೧೮	ಕುಂದಗೋಲ್	೦,೧೭,೯೩೯	೦,೧೮,೧೨೮	೦.೦೮,೪೦೦	೦,೦೮,೧೨೪
೧೯	ಮಾನ್‌ಪುರ್	೦.೧೫,೫೯೦	೦,೧೭,೫೮೨	೦,೦೫,೭೬೨	೦,೦೬,.೨೨೭
	ಒಟ್ಟು	೦೩,೩೯,೫೩೬	೩,೩೯,೮೮೭	೧,೭೭,೯೦೪	೧,೮೨,೫೬೮

ಸೀರೆ ಮತ್ತು ಧೋತಿ ಯೋಜನೆಯಲ್ಲಿ ಫಲಾನುಭವಿಗಳ ಪಂತ್ತು ಲಾಭ ಪಡೆದವರ ತಾಲ್ಲೂಕುವಾರು ಪಟ್ಟಿ.— ಡಿಸೆಂಬರ್ ೧೯೮೫.

ಸಂಖ್ಯೆ	ತಾಲ್ಲೂಕು ಹೆಸರು	ಫಲಾನುಭವಿಗಳ ಸಂಖ್ಯೆ		ಲಾಭ ಪಡೆದವರು	
		ಗಂಡಸರು	ಹೆಂಗಸರು	ಗಂಡಸರು	ಹೆಂಗಸರು
೧	೨	೩	೪	೫	೬
೧	ಗುಲ್ಬರ್ಗ	೦,೨೩,೫೬೩	೦,೨೩,೮೬೦	೦,೦೮,೯೬೦	೦,೦೯,೧೬೦
೨	ಭಾಲ್ಕಿ	೦,೧೯,೬೨೯	೦,೧೯,೧೩೧	೦,೦೫,೫೮೯	೦,೦೪,೪೫೦
೩	ಗಂಗಾವತಿ	೦,೩೨,೮೭೦	೦,೩೨,೮೦೦	೦,೧೨,೬೬೩	೦,೧೨,೭೬೨
೪	ಸಿರಗುಪ್ಪೆ	೦,೧೨,೮೦೯	೦,೧೩,೧೯೭	೦,೦೫,೫೭೩	೦,೮೫,೭೪೨
೫	ಬಾದಾಮಿ	೦,೧೪,೯೪೦	೦,೧೫, ೨೫೧	೦,೦೫,೭೩೨	೦,೦೫,೯೦೮
೬	ಕಂಮಂಟ	೦,೧೪,೨೮೯	೦,೧೩,೭೯೦	೦,೦೬,೬೦೦	೦,೦೬,೨೦೦
೭	ಗೋಕಾಕ್	೦,೨೯,೬೮೬	೦,೩೦,೭೫೭	೦,೧೨,೪೯೫	೦,೧೩,೭೭೬
೮	ಗದಗ	೦,೧೬,೨೨೪	೦,೧೭,೦೧೨	೦,೦೭,೩೫೦	೦,೦೭,೭೦೦
೯	ಭದ್ರಾವತಿ	೦,೧೨,೬೫೧	೦,೧೨,೬೯೯	೦,೦೩,೦೦೦	೦,೦೨,೮೦೦
೧೦	ಜಗಳೂರು	೦,೦೮,೭೦೭	೦,೦೮,೫೩೭	೦,೦೩,೦೦೦	೦,೦೨,೯೦೦
೧೧	ಚಿಕ್ಕಮಂಗಳೂರು	೦,೨೯,೮೪೫	೦,೨೬,೨೬೪	೦,೦೫,೪೭೦	೦,೦೩,೬೫೦
೧೨	ಆಲೂರ್	೦,೦೭,೧೨೯	೦,೦೭,೨೫೨	೦,೧೨,೯೨೫	೦,೧೦,೮೯೮
೧೩	ಕಂಂದಾಪುರ	೦,೧೭,೧೪೬	೦,೨೦,೦೪೨	೦,೦೨,೯೩೨	೦,೦೨,೯೬೧
೧೪	ಸೋಮವಾರಪೇಟೆ	೦,೧೨,೮೮೧	೦,೧೨,೭೪೬	೦,೦೭,೭೦೦	೦,೦೯,೦೦೦
೧೫	ಚನ್ನಪಟ್ಟಣ	೦,೧೮,೪೦೫	೦,೧೬,೯೯೨	೦,೦೨,೮೦೦	೦,೦೨,೮೦೦
೧೬	ಪಾಂಡವಪುರ	೦,೧೫,೮೫೯	೦,೧೫,೮೫೯	೦,೦೭,೯೯೧	೧,೦೭,೨೬೭
೧೭	ಗಂಬ್ಪಿ	೦,೩೬,೭೫೪	೦,೩೪,೭೬೧	೦,೦೬,೩೧೧	೦,೦೬,೩೫೫
೧೮	ಗಂಂಡ್ಲುಪೇಟೆ	೦,೧೫,೭೮೦	೦,೧೯,೮೭೧	೦,೧೬,೪೫೦	೦,೧೫,೬೦೦
೧೯	ಗೌರಿಬಿದನೂರು	೦,೩೪,೩೩೧	೦,೩೨,೪೨೨	೦,೧೪೩,೭೭	೦,೧೩೬,೩೦
	ಒಟ್ಟು	೩,೭೩,೦೩೪	೩,೬೯,೦೦೪	೧,೫೨೦,೬೧	೧,೫೯೩,೪೨

ಸೀರೆ ಮತ್ತು ಧೋತಿ ಯೋಜನೆಯಲ್ಲಿ ಫಲಾನುಭವಿಗಳ ಮತ್ತು ಲಾಭ ಪಡೆದವರ ತಾಲ್ಲೂಕುವಾರು ಪಟ್ಟಿ,—ಜನವರಿ ೧೯೮೬.

ಸಂಖ್ಯೆ	ತಾಲ್ಲೂಕು ಹೆಸರು	ಫಲಾನುಭವಿಗಳ ಸಂಖ್ಯೆ		ಲಾಭ ಪಡೆದವರು
		ಗಂಡಸರು	ಹೆಂಗಸರು	
೧	೨	೩	೪	೫
೧	ಶಿವಮೊಗ್ಗ	೧೯,೩೩೯	೧೮,೪೫೬	
೨	ಧಾರವಾಡ	೨೦,೨೦೨	೨೧,೨೯೫	
೩	ನರಗುಂದ	೫,೫೫೪	೬,೦೮೧	
೪	ದಾವಣಗೆರೆ	೧೬,೯೪೬	೧೬,೩೨೦	
೫	ಚಿಕ್ಕೋಡಿ	೪೨,೬೨೬	೪೨,೨೫೯	
೬	ಭಟ್ಕಳ	೯,೦೭೮	೯,೮೧೫	
೭	ಚಿಕ್ಕನಾಯಕನಹಳ್ಳಿ	೧೭,೦೧೦	೨೪,೩೦೦	
೮	ಮಳವಳ್ಳಿ	೨೩,೯೨೯	೨೩,೦೭೦	
೯	ದೇವನಹಳ್ಳಿ	೧೨,೫೯೦	೧೧,೯೮೩	
೧೦	ಚಾಮರಾಜನಗರ	೩೩,೬೭೪	೩೪,೬೫೬	
೧೧	ಚಿಕ್ಕಬಳ್ಳಾಪುರ	೧೩,೩೯೬	೧೩,೧೪೮	ಮಾಹಿತಿಯು ಇನ್ನೂ ಬರಬೇಕಾಗಿದೆ.
೧೨	ಸೊಂಡೂರು	೧೬,೧೦೫	೧೬,೨೧೩	
೧೩	ದೇವದುರ್ಗ	೨೧,೧೦೭	೧೯,೦೨೨	
೧೪	ಚಿಂಚೋಳಿ	೨೨,೨೩೭	೨೩,೦೬೨	
೧೫	ಬೀದರ್	೨೪,೧೦೮	೨೩,೨೩೨	
೧೬	ಬಾಗಲಕೋಟೆ	೧೮,೨೬೨	೧೭,೩೦೧	
೧೭	ಚನ್ನರಾಯಪಟ್ಟಣ	೧೯,೯೩೭	೨೦,೬೩೭	
೧೮	ತರೀಕೆರೆ	೨೩,೬೦೯	೨೦,೪೦೨	
೧೯	ಭಂಟವಾಳ್	೭,೧೨೩	೧೦,೯೨೮	
	ಒಟ್ಟು	೩,೬೬,೮೩೨	೩,೭೨,೧೦೦	

ಸೀರೆ ವಂತ್ತು ಧೋತಿ ಯೋಜನೆಯಲ್ಲಿ ಫಲಾನುಭವಿಗಳ ತಾಲ್ಲೂಕುವಾರು ಪಟ್ಟಿ.—ಫೆಬ್ರುವರಿ ೧೯೮೬.

ಸಂಖ್ಯೆ	ತಾಲ್ಲೂಕು ಹೆಸರು	ಫಲಾನುಭವಿಗಳ ಸಂಖ್ಯೆ		ಲಾಭ ಪಡೆದವರು	
		ಗಂಡಸರು	ಹೆಂಗಸರು	ಗಂಡಸರು	ಹೆಂಗಸರು
೧	೨	೩	೪	೫	೬
೧	ವಂಂಡಗೋಡು	೭,೩೩೭	೭,೩೭೯		
೨	ಚಿಂತಾವಂಣಿ	೨೨,೨೪೦	೨೧,೨೬೮		
೩	ಬಿಜಾಪುರ	೧೮,೬೪೪	೨೦,೭೬೬		
೪	ಮೊಳಕಾಲ್‌ಮುರು	೭,೩೩೯	೬,೭೫೨		
೫	ನರಸಿಂಹರಾಜಪುರ	೭,೧೩೭	೬,೦೯೬		
೬	ಪಾವಗಡ	೨೦,೨೫೦	೧೮,೫೭೫		
೭	ಬೆಳ್ತಂಗಡಿ	೭,೧೩೦	೮,೩೦೬		
೮	ನವಲ್‌ಗುಂದ	೧೨,೦೬೮	೧೨,೨೧೩		
೯	ಬ್ಯಾಡಗಿ	೧೧,೩೮೯	೧೧,೪೨೭	ಮಾಹಿತಿ ಇನ್ನೂ ಬರಬೇಕಾಗಿದೆ.	
೧೦	ಹಡಗಲಿ	೧೩,೭೨೧	೧೩,೭೪೨		
೧೧	ಬೀಳಗಿ	೧೧,೦೫೬	೧೦,೮೫೨		
೧೨	ಹುಮನಾಬಾದ್	೧೬,೧೫೦	೧೬,೪೦೪		
೧೩	ದೊಡ್ಡಬಳ್ಳಾಪುರ	೧೦,೮೦೫	೧೨.೬೯೭		
೧೪	ಸೌಧತ್ತಿ	೧೪,೩೯೭	೧೭,೦೬೦		
೧೫	ವಂದ್ಯೂರ್	೨೬,೦೭೬	೨೫,೩೯೬		
೧೬	ಟಿ. ನರಸೀಪುರ	೨೬,೨೮೫	೨೫,೫೬೮		
೧೭	ಮಾನ್ವಿ	೨೦,೧೧೫	೧೯,೫೨೧		
೧೮	ಶಿಕಾರಿಪುರ	೧೫,೩೧೬	೧೫,೦೫೮		
೧೯	ಬೇಲೂರು	೧೯,೦೫೮	೨೧,೪೯೨		
	ಒಟ್ಟು	೨,೮೬,೫೧೮	೨,೮೯.೫೭೨		

ಶ್ರೀ. ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ ಕ್ಷೇತ್ರ).—ವರ್ಷದಿಂದ ವರ್ಷಕ್ಕೆ ಹೀಗೆ ಹಂಚಿ ಕೊಂಡು ಹೋಗಿಬಿಟ್ಟರೆ ಒಂದು ವರ್ಷಕ್ಕೆ ಏನು ಎಲ್ಲರಿಗೂ ಸಿಗಬೇಕು ಅದು ಸಿಗುವುದಿಲ್ಲ. It is just like spreading butter too thin on the bread ಅಂತಾ ಹೇಳುತ್ತಾರೆ. ಈಗ ಸೀರೆ ಕ್ವಾಲಿಟಿ ಬಗ್ಗೆ ಜನರು ಹೇಳುತ್ತಾ ಇದ್ದಾರೆ. ಇದೂ ತುಂಬಾ ಜಾಳಾಗಿದೆಯೆಂದೂ ಹೇಳುತ್ತಿದ್ದಾರೆ. ಇದು ಬೇಗ ಹಾಳಾಗಿಬಿಡುತ್ತದೆ ಎಂಬ ಆತಂಕ ಜನರಿಗೆ ಇದೆ. ಕೊನೆಯ ಪಕ್ಷ ಮಾರ್ಚ್ ಒಳಗೆ ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲಾ ಮುನಿಸಿಪಾಲ್ ಏರಿಯಾ ಜನರಿಗೆ ಎರಡೆರಡೂ ಜೊತೆ ಸಿಗುವಂತೆ ವ್ಯವಸ್ಥೆ ಮಾಡುತ್ತೀರಾ ? ಹೇಗೆ ?

ಶ್ರೀ ಆರ್. ವಿ. ದೇಶಪಾಂಡೆ.—ಶ್ರೀಮಾನ್ ಶ್ರೀನಿವಾಸ್‌ರವರು ಕೇಳಿರುವಂಶೆ ಒಂದೂ ತಾಲೂಕಿನಲ್ಲಿ ವಿತರಣೆ ಶುರುವಾದ ನಂತರ ಅದನ್ನು ಪ್ರತಿಯೊಂದು ಹಳ್ಳಿಯಲ್ಲೂ ಸಹಾ ಕಡ್ಡಾಯವಾಗಿ ಹಂಚುತ್ತಾರೆಂದೂ ಕೇಳಿದ್ದೇವೆ. ಒಮ್ಮೆ ಒಂದು ತಾಲ್ಲೂಕಿನಲ್ಲಿ ಶುರುವಾದರೆ ಎನ್‌ಟೈರ್ ತಾಲ್ಲೂಕನ್ನು ಕವರ್ ಮಾಡಬೇಕಾಗುತ್ತದೆ. ಎರಡನೇಯದೂ ಕಂಪ್ಟಗಿಯಲ್ಲಿ ನಾಲ್ಕು ಸಾವಿರ ಜನರಿಗೆ ಹಂಚಿದ್ದಾರೆಂದು ತಾವು ಹೇಳಿದಿರಿ, ಇವತ್ತು ತಾವು ಕೇಳಿದ ಪ್ರಶ್ನೆ ಎಷ್ಟು ಜನರಿಗೆ ಇದರಿಂದ ಅನುಕೂಲವಾಗಿದೆಯೆಂದೂ ? ಒಮ್ಮೆ ಇದೂ ಶುರುವಾದ ಮೇಲೆ ಮೂರು ತಿಂಗಳು ಆ ತಾಲ್ಲೂಕಿನಲ್ಲಿ ವಿತರಣೆ ನಡೆಯುತ್ತದೆ. ಆದ್ದರಿಂದ ಅಕ್ಟೋಬರ್ ಫಿಗರ್ಸ್ ನೈನಲ್ ಫಿಗರ್ಸ್ ಬೇರೆ ತಾಲ್ಲೂಕಿನಲ್ಲಿ ವಿತರಣೆ ನಡೆಯುತ್ತಾ ಇದೆ. ಅದರ ಫಿಗರ್ಸ್ ಇನ್ನೂ ಬಂದಿಲ್ಲ ಉದಾಹರಣೆಗೆ ಜನವರಿಯಲ್ಲಿ ವಿತರಣೆ ಶುರುವಾಗಿದೆ, ಅದರ ಫೈನಲ್ಸ್ ಫಿಗರ್ಸ್ ಏಪ್ರಿಲ್‌ನಲ್ಲಿ ಬರುತ್ತದೆ. ಜನವರಿ, ಫೆಬ್ರವರಿ, ಮಾರ್ಚ್ ಈ ಮೂರು ತಿಂಗಳಲ್ಲಿ ವಿತರಣೆ ನಡೆಯುತ್ತದೆ. ಡಿಸೆಂಬರ್‌ನಲ್ಲಿ ವಿತರಣೆ ಶುರುವಾದದ್ದು ಫೆಬ್ರುವರಿವರೆವಿಗೂ ನಡೆಯುತ್ತದೆ. ಅಕ್ಟೋಬರ್‌ನಲ್ಲಿ ನಾವು ಏನು ವಿತರಣೆ ಮಾಡಿದೆವು ಅದೇ ನಮಗೆ ಫೈನಲ್ ಫಿಗರ್ಸ್. ಬೇರೆ ಫಿಗರ್ಸ್ ಏನು ಇದೆ ಅದು ಇನ್ನು ಬರಬೇಕಾಗಿದೆ. ಮೂರನೇಯದೂ, ಎರಡು ಸೀರೆ ಎರಡು ಪಂಚೆ ಕೊಡುವುದಕ್ಕೆ ಸಾಧ್ಯವೇ ಎಂಬುದು ? ನಮ್ಮ ಯೋಜನೆಯಲ್ಲಿ ಎರಡು ಸೀರೆ ಎರಡು ಪಂಚೆ ಕೊಡುವ ಉದ್ದೇಶವಿದೆ. ಆದರೆ ನಮ್ಮ ಬೇರೆ ಉದ್ದೇಶ ಏನೆಂದರೆ, ನೇಕಾರರಿಗೆ ಸಹಾಯ ಮಾಡಬೇಕು, ಹೆಚ್ಚು ಉದ್ಯೋಗವನ್ನು ಜನರಿಗೆ ಕೊಡಬೇಕು, ಮತ್ತು ಕಡುಬಡವರಿಗೆ ಸಹಾಯ ಮಾಡಬೇಕು, ಅವರಿಗೆ ಎರಡು ಸೀರೆ ಎರಡು ಪಂಚೆ ಕೊಡಬೇಕು ಎಂಬುದು ನಾವು ಇವುಗಳನ್ನು ಕೊಡಬೇಕಾದರೆ ದೊಡ್ಡ ಪ್ರಮಾಣದಲ್ಲಿ ನೂಲನ್ನು ತಯಾರು ಮಾಡಬೇಕಾಗುತ್ತದೆ. ಈ ಕಾರ್ಯಕ್ರಮವನ್ನು ನಮ್ಮ ಕೈವಂಗ್ಗದ ನಿಗಮ ಮತ್ತು ಸರ್ಕಾರ ಹಾಕಿಕೊಂಡಿದೆ. ಆದ್ದರಿಂದ ಎಲ್ಲರಿಗೂ ಎರಡೂ ಸೀರೆ ಎರಡು ಪಂಚೆ ಕೊಡಲಿಕ್ಕೆ ಸಧ್ಯಕ್ಕೆ ಸಾಧ್ಯವಾಗುವುದಿಲ್ಲ. ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಏನು ವಿತರಣೆ ಮಾಡಬೇಕಾಗಿತ್ತೋ ಅದನ್ನು ಮಾರ್ಚ್‌ನಲ್ಲಿ ಶುರು ಮಾಡುತ್ತೇವೆ. ಮೇ ವಲ್ಲಿ ಏನೂ ವಿತರಣೆ ಮಾಡಬೇಕಾಗಿತ್ತೋ ಅದನ್ನು ಏಪ್ರಿಲ್‌ನಲ್ಲಿ ಶುರು ಮಾಡುತ್ತೇವೆ. ಏಕೆಂದರೆ ಹಬ್ಬಗಳು ಹತ್ತಿರ ಬರುತ್ತಿವೆ, ಕಡುಬಡವರಿಗೆ ಸಹಾಯ ಮಾಡುವ ದೃಷ್ಟಿಯಿಂದ ಈ ಯೋಜನೆಯನ್ನು ಹಾಕಿ ಕೊಂಡಿದ್ದೇವೆ.

ಶ್ರೀ ಡಿ. ಟಿ. ಜಯಕಿಂಮಾರ್.—ಸನ್ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ತಮ್ಮ ಉತ್ತರದಲ್ಲಿ ತಾಲ್ಲೂಕುಗಳಿಗನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಕನ್ನಡ ವರ್ಣ ಮಾಲೆಯ ಮೇಲೆ ಆರಿಸಲಾಗವುದೆಂದು ಹೇಳಿದ್ದಾರೆ. ಆದರೆ ಈ ಪಟ್ಟಿಯಲ್ಲಿ ಮಡಿಕೇರಿಯಂ ಸೇರಿದೆಅಂದರೆ 'ನ' ಆದಮೇಲೆ 'ಪ' ಬರುತ್ತದೋ, ಅಥವಾ 'ಪ' ಆದಮೇಲೆ 'ನ' ಬರುತ್ತದೋ ? ಅಂದರೆ ನಂಜನಗೂಡು ಬಂದ್ ಆದಮೇಲೆ ಅಲ್ಲವೇ ಮಡಕೇರಿ ಬರುವುದೂ. ಇದನ್ನು ದಯವಿಟ್ಟು ಮಂತ್ರಿಗಳು ತಿಳಿಸಬೇಕು. ಮತ್ತೊಂದು ವಿಚಾರ ವೆಂದರೆ ಇವತ್ತು ವಿರೋಧ ಪಕ್ಷದವರು ಕಳಪೆ ಸೀರೆಗಳನ್ನು ಕೊಡುತ್ತಿದ್ದಾರೆಂದು, ಸರಿಯಾದ ಸೀರೆ ಯನ್ನು ಕೊಡುತ್ತಿಲ್ಲವೆಂದೂ ಹೇಳುತ್ತಿದ್ದಾರೆ. ನಾನಾದರೂ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಏನೆಂದರೆ ಎರಡು ಸೀರೆ ಕೊಡುವ ಬದಲು ಒಂದೇ ಸೀರೆ ಕೊಡಿ, ಜೊತೆಗೆ ಅದರ ಗುಣಮಟ್ಟ ಉತ್ತಮವಿದ್ದು, ಬಾಳಿಕೆ ಬರುವಂತಹ ಸೀರೆಯನ್ನು ಕೋಡಿ, ಜೊತೆಗೆ ಸೀರೆಗಳನ್ನು ಉತ್ಪಾದನೆ ಮಾಡತಕ್ಕ ಮಿಲ್ಲೂಗಳಿಗೆ ಇಂತಿಷ್ಟು ಅಂದರೆ ೨೦ ಪರ್ಸೆಂಟ್ ಕಡುಬಡವರಿಗೋಸ್ಕರ ಸಬ್ಸಿಡಿ ರೂಪದಲ್ಲಿ ಸೀರೆಗಳನ್ನು ತಯಾರು ಮಾಡಬೇಕೆಂದು ಆದೇಶ ನೀಡಿದರೆ, ಬಹುಶಃ ಸರ್ಕಾರಕ್ಕೆ ಹೊರೆ ಕೂಡ ತಪ್ಪಿದಂತಾಗುತ್ತದೆ. ಇದರ ಜೊತೆಗೆ ಜನರಿಗೆ ಅನುಕೂಲವಾಗುತ್ತದೆ. ನಮ್ಮ ನಂಜನಗೂಡಿನ

ತಾಲ್ಲೂಕಿಗೆ ಇದುವರೆವಿಗೂ ಕೊಟ್ಟಿಲ್ಲ: ನಂಜನಗೂಡಿನ ತಾಲ್ಲೂಕಿಗೆ ಯಾವಾಗ ಕೊಡುತ್ತೀರಿ? ಅಥವಾ ಕನ್ನಡ ವರ್ಣ ಮಾಲೆಯ ಪ್ರಕಾರ ಕೊಡುತ್ತೀರೋ ತಿಳಿಸಿ ? ಇದರ ಮೊದಲ ಉದ್ದೇಶ ಕಡುಬಡವರಿಗೆ ಕೊಡತಕ್ಕದ್ದು, ಆದರೆ ಇದು ಕಡುಬಡವರಿಗೆ ತಲುಪುತ್ತಿಲ್ಲ. ಆಹಾರ ಮಂತ್ರಿಗಳು ಹಸಿರುಕಾರ್ಡುಗಳನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಅದು ವ್ಯತ್ಯಾಸವಾಗಿ ಯಾರಿಗೆ ದೊರಕಬೇಕೋ ಅವರಿಗೆ ದೊರಕಂತ್ತಿಲ್ಲ. ಯಾರೂ ಅನುಕೂಲವಾಗಿರುತ್ತಾರೋ, ಯಾರೂ ಹಣ ಕೊಡುತ್ತಾರೋ, ಅಂಥಹ ವರಿಗೆ ಈ ಹಸಿರು ಕಾರ್ಡುಗಳು ತಲುಪುತ್ತಿವೆ. ಕಡುಬಡವರಿಗೆ ಈ ಹಸಿರು ಕಾರ್ಡುಗಳ ಮುಖಾಂತರ ಸೀರೆಗಳನ್ನು ಧೋತಿಗಳನ್ನು ಹಂಚುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ ?

ಶ್ರೀ ಆರ್. ವಿ. ದೇಶಪಾಂಡೆ.—ನಾವು ಈಗಾಗಲೇ ಕನ್ನಡ ವರ್ಣಮಾಲೆಯ ಪ್ರಕಾರ ತಾಲ್ಲೂಕುವಾರು ಸೀರೆಗಳನ್ನು ಹಂಚುತ್ತಾ ಇದ್ದೇವೆ. ಎರಡನೇಯ ಪ್ರಶ್ನೆ.....

ಶ್ರೀ ಡಿ. ಬಿ. ಜೈಕುಮಾರ್.—'ನ' ಆದಮೇಲೆ ಅಲ್ಲವೆ 'ಮ' ಬರುವುದು.

ಶ್ರೀ ಆರ್. ವಿ. ದೇಶಪಾಂಡೆ.—ನೀವು ಹೇಳುವ ಪ್ರಕಾರ ತಪ್ಪಾಗಿದ್ದರೆ, ಅದನ್ನು ಸರಿಪಡಿಸುತ್ತೇವೆ. ಈಗ ಯಾರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ, ಅವರಿಗೆ ಸಹಾಯವಾಗಲೆಂದು ಇಡೀ ರಾಜ್ಯದಲ್ಲಿ ಸರ್ವೆ ಮಾಡಿದ ನಂತರ ೬೫,೫೯ ೦೮೫ ಜನರನ್ನು ಈ ಸ್ಕೀಮ್‌ನಲ್ಲಿ ಗುರುತಿಸಲಾಗಿದೆ. ಕೆಲವಡೆ ಆರ್ಥಿಕವಾಗಿ ದುರ್ಬಲರಾದ ಜನ ಇದ್ದಾರೆ, ಅವರಿಗೆ ಈ ಲಾಭ ಸಿಗಲಿ, ಗ್ರೀನ್ ಕಾರ್ಡ್ ಸಿಗಲೆಂದು ಈಗಾಗಲೇ ಈ ಬಗ್ಗೆ ಶೋಧ ನಡೆದಿದೆ. ಅದೇ ರೀತಿ ಸರ್ವೆ ರಿಪೋರ್ಟ್ ಕೂಡ ಬಂದಿದೆ. ಅಂಥಹ ಜನರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಸೀರೆಯ ಕ್ವಾಲಿಟಿ ಬಗ್ಗೆ ಹೇಳಿದ್ದಾರೆ, ನನ್ನ ಪಂಟ್ಟಿಗೆ ನೇರವಾಗಿ ಯಾರಿಂದಲೂ ಈ ಸೀರೆಯ ಬಗ್ಗೆ ಯಾವುದೇ ದೂರು ಬಂದಿಲ್ಲ. ಹೊನ್ನಾಳಿಯಲ್ಲಿ ಸೀರೆಯ ಕ್ವಾಲಿಟಿ ಸರಿಯಿಲ್ಲವೆಂದು ಹೇಳಿದರೆ ಅದನ್ನು ಉತ್ತಮಪಡಿಸುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ರಮೇಶ್‌ಕುಮಾರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀನಿವಾಸ್‌ರವರ ಪ್ರಶ್ನೆಗೆ ಉತ್ತರ ಕೊಡುತ್ತಾ ಸಚಿವರು ಒಂದು ತಾಲ್ಲೂಕನ್ನು ಒಂದು ಸಾರಿ ಆರಿಸಿಕೊಂಡರೆ ಅಲ್ಲಿರತಕ್ಕ ಎಲ್ಲಾ ಅರ್ಹರಾದ ಜನರಿಗೆ ಹಂಚುತ್ತೇವೆಂದರು. ಕುಷ್ಟಗಿ ತಾಲ್ಲೂಕಿನ ಅಂಕಿಅಂಶವನ್ನು ಇಲ್ಲಿ ಕೊಟ್ಟಿದ್ದಾರೆ. ಆಲ್ಲಿ ೧೬ ಸಾವಿರದವರೆಗೆ ಅನುಕೂಲತೆಯನ್ನು ಪಡೆಯುವವರನ್ನು ಗುರುತಿಸಿದ್ದಾರೆ ಆದರಲ್ಲಿ ನಾಲ್ಕು ಸಾವಿರ ಜನರಿಗೆ ಕೊಟ್ಟಿದ್ದಾರೆ. ಇವರು ಕೊಟ್ಟಿರತಕ್ಕ ಅಂಕಿಅಂಶಗಳು ಫೈನಲ್ ಫಿಗರ್ಸ್ ಅಂತಾ ಬೇರೆ ಮಂತ್ರಿಗಳು ಹೇಳಿದ್ದಾರೆ, ಹಾಗಿದ್ದರೆ ಇನ್ನುಳಿದ ೧೨ ಸಾವಿರ ಜನ ಎಲ್ಲಿ ಹೋದರು ? ಇಲ್ಲಿ ಹೇಳಿರತಕ್ಕ ಹೇಳಿಕೆ ಅಷ್ಟೊಂದು ಸಮಂಜಸವಾದುದಲ್ಲ, ಅದರಿಂದ ದಯವಿಟ್ಟು ಇದರ ಬಗ್ಗೆ ಕ್ಲಾರಿಫೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈಗ ಕುಷ್ಟಗಿ ಬಗ್ಗೆ ಹೇಳಿದ್ದಾರೆ. ಇಲ್ಲಿ ನಾವು ನವೆಂಬರ್‌ನಲ್ಲಿ ಶುರುಮಾಡಿದ್ದೆವು. ಅಲ್ಲಿ ಜನವರಿಯ ಕೊನೆಗೆ ಅಂದರೆ ಈಗಾಗಲೇ ವಿತರಣೆ ಮುಗಿದಿದೆ. ಈ ಫಿಗರ್ಸ್ ಬಂದಿದ್ದು ಡಿಸೆಂಬರ್‌ನಲ್ಲಿ. ಏಕೆಂದರೆ ಅವರು ಪ್ರಶ್ನೆ ಕೇಳಿದಾಗ ಈ ತಿಳುವಳಿಕೆಯನ್ನು ಕಳುಹಿಸಿದ್ದೆ, ಆದರೆ ಅದು ಫೈನಲ್ ಫಿಗರ್ಸ್ ಅಲ್ಲವೆಂದು ಹೇಳಿದ್ದೆ. ಈ ಸ್ಕೀಮ್ ಪ್ರಾರಂಭವಾದಾಗ ೪೦ ಪರ್ಸೆಂಟ್ ಇತ್ತು, ಆದರೆ ಈಗ ಕರ್ನಾಟಕ ರಾಜ್ಯದಲ್ಲಿ ಈ ಸ್ಕೀಮ್ ೭೩ ಪರ್ಸೆಂಟ್ ಇದೆ.

SRI RAMESH KUMAR.—To meet the demands of the entire beneficiaries under the programme, what action has been taken ? Is the Government commited to meet the demands of the entire beneficiaries identified ?

SRI DESHPANDE.—The Government is fully committed to meet the demands of the beneficiaies already identified provided they take the benefit... ..

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ಹೇಳಿರುವಂತೆ ಒಂದು ತಾಲ್ಲೂಕಿನಲ್ಲಿ ಇದನ್ನು ಜಾರಿಗೆ ಕೊಟ್ಟು ತಕ್ಷಣ ನಾವು ಎಲ್ಲಾ ಹಳ್ಳಿಗಳಿಗೂ ಕೊಡಬೇಕಾದರೆ ಎನ್ನುವುದು ಬರೀ ಕಾಗದದಲ್ಲಿ ಬಂದ ವರದಿ ಇರಬೇಕು. ನನಗೆ ಗೊತ್ತಿರುವ ವಿಷಯಕ್ಕೆ ಒಂದು ಹಳ್ಳಿಯಲ್ಲಿ ಶುರುವಾಡಿದೆ ಎಂದರೆ ಎರಡು ಮೂರು ಹಳ್ಳಿಗಳನ್ನು ಸೇರಿಸಿ ಮಂತ್ರಿಗಳು ತಮ್ಮವರನ್ನು ಗುರುತಿಸಿ ಅದು ಕೊಟ್ಟ ಹಾಗೆ ಮಾಡಿ ಮುಗಿಸಬಹುದು. ನೀವು ಹೇಳಿದ ಹಾಗೆ ಜಾರಿ ಆದಂತೆ ಕಾಣುತ್ತಿಲ್ಲ. ಈಗಿರುವಕ್ಕೆ ಪರಿಸ್ಥಿತಿಯಲ್ಲಿ ಈ ಸ್ಕೀಮ್ ಸರಿಯಾಗಿ ಎಲ್ಲ ಹಳ್ಳಿಗಳಲ್ಲೂ ಜಾರಿ ಆಗುತ್ತಿಲ್ಲ. ಒಂದು ವೇಳೆ ಬಹಳ ಶ್ರದ್ಧೆಯಿಂದ ಇದನ್ನು ಹಳ್ಳಿಗಳಲ್ಲಿ ಜಾರಿಗೆ ತರದೆ ಹೋದರೆ ಈ ಸ್ಕೀಮ್ ಸಂಪೂರ್ಣವಾಗಿ ಎಲ್ಲಿಯಾದರೂ ಒಂದು ಕಡೆ ಬಿದ್ದು ಅಪಘಾತಕ್ಕೆ ಗುರಿಯಾತಕ್ಕ ಸಂಭವ ಇದೆ. ಏನೋ ವರದಿಯನ್ನು ಕಳುಹಿಸುತ್ತಾರೆಂದು ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಡಿ. ಬಟ್ಟೆ ಕ್ವಾಲಿಟಿ ಬಗ್ಗೆ ಹೇಳಿದಿರಿ, ಕೈಮಗ್ಗದ ನಿಗಮದ ಬಗ್ಗೆ ಹೇಳಿದಿರಿ, ಎರಡನ್ನು ಮಾಡುತ್ತೇನೆಂದು ಹೋದರೆ ಎರಡು ದೋಣಿಗಳ ಮೇಲೆ ಕಾಲು ಇಟ್ಟು ಕೊಂಡ ಹಾಗೆ ಆಗುತ್ತದೆ. ಈಗಿರುವ ಕೈಮಗ್ಗದ ವಲಯಕ್ಕೆ ಬೇಕಾದ ಬಟ್ಟೆಯನ್ನು ಪೂರೈಸಲು ಸಾಧ್ಯವಿಲ್ಲ, ಇದರ ಜೊತೆಗೆ ಸಿಕ್ ಮಿಲ್ಲುಗಳನ್ನು ಸಹ ಸೇರಿಸಿಕೊಂಡಿದ್ದೀರಿ. ಈ ಯೋಜನೆಯನ್ನು ಬೇರೆ ಯೋಜನೆಗಳಿಗೆ ಸೇರಿಸಿಕೊಂಡು ಬಿಟ್ಟರೆ ಇದು ಹಾಳಾಗಿಬಿಡುತ್ತದೆ. ಆದ್ದರಿಂದ ಈ ಯೋಜನೆಯನ್ನು ಉದ್ದೇಶ ಪೂರ್ವಕವಾಗಿ ಒಂದು ವರ್ಷಕ್ಕೆ ಗುರುತಿಸಲ್ಪಟ್ಟಿರುವ ಫಲಾನುಭವಿಗಳಿಗೆ ವರ್ಷಕ್ಕೆ ಎರಡೆರಡು ಜೊತೆ, ಕಡಿಮೆ ದರದಲ್ಲಿ ಸಿಗುವಂತೆ ಜಾರಿಗೆ ತರಲು ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಈ ಯೋಜನೆ ಹಾಳಾಗುತ್ತದೆ ಎನ್ನುವುದಕ್ಕೆ ಮಾತನ್ನು ತಮಗೆ ಒತ್ತಾಯ ಪೂರ್ವಕವಾಗಿ ಹೇಳಿ, ಅರ್ಹರಾದ ಎಲ್ಲಾ ವ್ಯಕ್ತಿಗಳನ್ನು ಗಮನಿಸಿಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದಂತೆ ಒಮ್ಮೆಲೇ ಒಂದು ತಾಲ್ಲೂಕಿನಲ್ಲಿ ಇದನ್ನು ಶುರು ಮಾಡಿದರೆ ಎಲ್ಲಾ ಹಳ್ಳಿಗಳನ್ನು ಕವರ್ ಮಾಡುತ್ತೇವೆಂದು ತಿಳಿಸಿದ್ದೇನೆ. ಆದರೆ ಮಾನ್ಯ ಶ್ರೀನಿವಾಸ್‌ರವರು ಹೇಳಿರುವುದು ನಿರ್ದಿಷ್ಟವಾಗಿ ನನ್ನ ಗಮನಕ್ಕೆ ಬಂದರೆ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಈ ಬಗ್ಗೆ ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಇಡೀ ರಾಜ್ಯದಲ್ಲಿ ೧೨,೨೮೯ ರಿಟೈಲ್ ಪಾಯಿಂಟ್ಸ್ ತೆಗೆದಿದ್ದೇವೆ, ಕೆಲವು ಕಡೆ ಇದರ ವಿತರಣೆ ಸರಿಯಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ನೇರವಾಗಿ ಹೊನ್ನಾವಳಿಯಲ್ಲಿ ವಿತರಣೆ ಸರಿಯಾಗಿಲ್ಲವೆಂದು ಹೇಳಿದ್ದಾರೆ, ಅದನ್ನು ನನ್ನ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ಸೂಕ್ತವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ.—ತಾವು ಒಬ್ಬೊಬ್ಬರಿಗೆ ಎರಡು ಮೂರು ಉಪಪ್ರಶ್ನೆಗಳನ್ನು ಕೇಳಲು ಅವಕಾಶ ಕೊಡುತ್ತಿದ್ದೀರಿ.

ಶ್ರೀ ಪಟಮಕ್ಕಿ ರತ್ನಾಕರ್.—ಮಂತ್ರಿಗಳ ಮನಸ್ಸಿಗೆ ನೋವಾದರೆ ಬೇಡ.

ಅಧ್ಯಕ್ಷರು.—ಶ್ರೀನಿವಾಸರೇ ನಿಮಗೆ ಎಷ್ಟು ಅವಕಾಶ ಕೊಟ್ಟರೂ ಸಾಕಾಗುವುದಿಲ್ಲ. ಊಟ ಮಾಡಿದರೂ ಉಪವಾಸ ಇದ್ದ ಹಾಗೆ, ಎಷ್ಟು ಊಟ ಹಾಕಿದರೂ ಹಸಿವಿದೆ ಎನ್ನುತ್ತೀರಿ.

ಶ್ರೀ ಪಟಮಕ್ಕಿ ರತ್ನಾಕರ್.—ನಮ್ಮ ಕಾನೂನು ಸಚಿವರು ಕಾನೂನಿನ ಪಾಂಡಿತ್ಯದಲ್ಲಿಯೇ ಮುಳುಗಿ ಹೋಗಿದ್ದಾರೆ, ಸಮಸ್ಯೆಗಳ ಪರಿಹಾರ ಅವರಿಗೆ ಬೇಕಾಗಿಲ್ಲ.

ಅಧ್ಯಕ್ಷರು.—ಗೈರು ಹಾಜರಿಯಾಗಿರುವವನ್ನು ಮತ್ತೊಮ್ಮೆ ಕರೆಯುತ್ತೇವೆ. ಬಾಸ್ಕರಪ್ಪ ಗೈರು ಹಾಜರಿ, ಜಾರ್ಜ್ ಗೈರು ಹಾಜರಿ.

ಅಧ್ಯಕ್ಷರು.—ಪತ್ತೆ ಪಂಪಾಪತಿ, ಶರಣಬಸಪ್ಪ, ಗೈರುಹಾಜರಿಯಾಗಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೇ ನಾನು ಎರಡು ಸಲ ಪ್ರಶ್ನೆಯನ್ನು ಕೇಳಿದ್ದೆ. ಮುಂದೆ ಮುಂದೆ ಹೋಗುತ್ತಿದೆ. ಉತ್ತರ ಬರುತ್ತಿಲ್ಲ.

ಅಧ್ಯಕ್ಷರು.—ಅದಕ್ಕೆ ಕೆಲವು ಕಾರಣಗಳು ಇವೆ. ತಾವು ಕುಳಿತುಕೊಳ್ಳಿ.